# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: | 726 (850) |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 15.12.2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಹಲವಾರು ಕಡೆಗಳಲ್ಲಿ ಅನಧಿಕೃತವಾಗಿ ಕ್ಲಿನಿಕ್ ಮತ್ತು ಮೆಡಿಕಲ್‌ಗಳನ್ನು ತೆರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗಮನಕ್ಕೆ ಬಂದಿದೆ. |
| ಆ) | ಬಂದಿದ್ದಲ್ಲಿ, ನಕಲಿ ವೈದ್ಯಕೀಯ ಪ್ರಮಾಣ ಪತ್ರ ಪಡೆದು ಕ್ಲಿನಿಕ್‌ಗಳನ್ನು ತೆರೆದು ಅನಧಿಕೃತವಾಗಿ ಕಾರ್ಯ ನಿರ್ವಹಿಸುತ್ತಿರುವವರ ವಿರುದ್ಧ ಸರ್ಕಾರ ಯಾವ ರೀತಿಯ ಕಠಿಣ ಕ್ರಮಗಳನ್ನು ಕೈಗೊಂಡಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು) | ನಕಲಿ ವೈದ್ಯಕೀಯ ಪ್ರಮಾಣ ಪತ್ರ ಪಡೆದು ಕ್ಲಿನಿಕ್‌ಗಳನ್ನು ತೆರೆದು ಅನಧಿಕೃತವಾಗಿ ಕಾರ್ಯ ನಿರ್ವಹಿಸುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಸುತ್ತೋಲೆ ಸಂಖ್ಯೆ: HFW 155 FPR 2025, Date:11.11.2025 ನ್ನು ಹೊರಡಿಸಲಾಗಿದೆ. **ಸುತ್ತೋಲೆಯ ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.**<br><br>ಅದರಂತೆ, ಈ ಹಿಂದೆ ನಕಲಿ ವೈದ್ಯರ ಕ್ಲಿನಿಕ್‌ಗಳನ್ನು ಪತ್ತೆ ಹಚ್ಚಲು ಅಧಿಸೂಚನೆ ಸಂಖ್ಯೆ: ಆಕುಕ 325 ಪಿಐಎಂ 2017, ದಿನಾಂಕ: 29.08.2017 ರಲ್ಲಿ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧೀನದಲ್ಲಿ ಜಿಲ್ಲಾ ಮಟ್ಟದ ವಿಶೇಷ ಪಡೆಯನ್ನು ರಚಿಸಲಾಗಿದೆ.<br><br>**ಅಧಿಸೂಚನೆ ಪ್ರತಿಯನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.**<br><br>ರಚಿಸಲಾದ ಜಿಲ್ಲಾ ಮಟ್ಟದ ವಿಶೇಷ ಪಡೆಯು ತನ್ನ ಜಿಲ್ಲಾ ವ್ಯಾಪ್ತಿಯಲ್ಲಿ ನಕಲಿ ವೈದ್ಯ ವೃತ್ತಿ ನಡೆಸುತ್ತಿರುವ ನಕಲಿ ವೈದ್ಯರನ್ನು ಪತ್ತೆ ಹಚ್ಚಿ, ಅವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುತ್ತದೆ.<br><br>ಮುಂದುವರೆದು, ಕೆ.ಪಿ.ಎಂ.ಇ. ಕಾಯ್ದೆಯನ್ವಯ, ಸೆಕ್ಷನ್ 2(k) ನ್ನು ಉಲ್ಲಂಘಿಸಿ, ನಕಲಿ ವೈದ್ಯರು ಅನಧಿಕೃತವಾಗಿ ವೈದ್ಯಕೀಯ ವೃತ್ತಿ ನಡೆಸುತ್ತಿರುವುದು ಕಂಡು ಬಂದಲ್ಲಿ ಅವರ ವಿರುದ್ಧ ಕೆ.ಪಿ.ಎಂ.ಇ. ಅಧಿನಿಯಮ, 2007 ರ ಸೆಕ್ಷನ್ 19(1), (2) & (5) ರಂತೆ, ಮೂರು (03) ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾಗೃಹ ವಾಸ ಶಿಕ್ಷೆ ಮತ್ತು ರೂ.1.00ಲಕ್ಷದವರಗೆ ದಂಡ ವಿಧಿಸಲಾಗುತ್ತದೆ ಹಾಗೂ ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ನೋಂದಣಿ ಮಾಡದೇ ನಡೆಸಲಾಗುತ್ತಿದೆ ಅಥವಾ ನಿರ್ವಹಿಸಲಾಗುತ್ತಿದೆ ಎಂದು ದೃಡವಾದಲ್ಲಿ, ಕೆ.ಪಿ.ಎಂ.ಇ. ಅಧಿನಿಯಮ, 2007ರ ಸೆಕ್ಷನ್ 22(1) ರಂತೆ ಸಂಸ್ಥೆಯನ್ನು ಕೂಡಲೇ ಮುಚ್ಚಿಸಿ ಕ್ರಮ |

| | | |
|---|---|---|
| | | ಕೈಗೊಳ್ಳಲಾಗುವುದು ಮತ್ತು ಸೆಕ್ಷನ್ 15(1) ಮತ್ತು (5) ರಂತೆ, ಕೆ.ಪಿ.ಎಂ.ಇ. ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ನೀಡಿದ ಯಾವುದೇ ನಿರ್ದೇಶನಗಳನ್ನು ಪಾಲಿಸದೇ ಇರುವ ಖಾಸಗಿ ವೈದ್ಯಕೀಯ ಸಂಸ್ಥೆಯ ವಿರುದ್ಧ ಐವತ್ತು ಸಾವಿರ ರೂಪಾಯಿಗಳ ದಂಡ ಮತ್ತು ಸಂಸ್ಥೆಯ ನೋಂದಣಿಯನ್ನು ರದ್ದುಪಡಿಸಿ ಕ್ರಮ ಕೈಗೊಳ್ಳಲಾಗುತ್ತದೆ.<br><br>**ಕಾಯ್ದೆಯ ಪ್ರತಿಯನ್ನು ಅನುಬಂಧ-3 ರಲ್ಲಿ ನೀಡಲಾಗಿದೆ.** |
| ಇ) | ಕಳೆದ 2 ವರ್ಷಗಳಲ್ಲಿ ಜನರ ಜೀವಗಳ ಜೊತೆಗೆ ಆಟವಾಡುವ ಇಂತಹ ನಕಲಿ ವೈದ್ಯರು ಮತ್ತು ಕ್ಲಿನಿಕ್‌ಗಳ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿವೆ; (ಜಿಲ್ಲಾವಾರು ಮಾಹಿತಿ ಒದಗಿಸುವುದು ) | ಕಳೆದ ಎರಡು (02) ವರ್ಷಗಳಲ್ಲಿ ನಕಲಿ ವೈದ್ಯರು ಮತ್ತು ಕ್ಲಿನಿಕ್‌ಗಳ ವಿರುದ್ಧ 556 ಪ್ರಕರಣಗಳು ದಾಖಲಾಗಿವೆ.<br><br>**ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-4 ರಲ್ಲಿ ನೀಡಲಾಗಿದೆ.** |
| ಈ) | ಮುಂದಿನ ದಿನಗಳಲ್ಲಿ ಈ ರೀತಿಯ ಅನಧಿಕೃತ ಕ್ಲಿನಿಕ್ ಮತ್ತು ಮೆಡಿಕಲ್ ಶಾಪ್‌ಗಳನ್ನು ತೆರೆಯದಿರಲು ಸರ್ಕಾರ ಕೈಗೊಂಡ ಸೂಕ್ತ ಕ್ರಮಗಳಾವುವು? | ಅನಧಿಕೃತವಾಗಿ ಕ್ಲಿನಿಕ್ ತೆರೆಯದಿರಲು ಸುತ್ತೋಲೆ ಸಂಖ್ಯೆ: HFW 155 FPR 2025, ದಿನಾಂಕ: 11.11.2025 ರಲ್ಲಿ ನೀಡಿರುವ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಮುಂದಿನ ದಿನಗಳಲ್ಲಿ ನಕಲಿ ವೈದ್ಯರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳಲಾಗುವುದು. |

ಸಂಖ್ಯೆ: ಆಕುಕ 123 ಎಸ್.ಟಿ.ಕ್ಯೂ. 2025

( ದಿನೇಶ್‌ಗುಂಡೂರಾವ್ )
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅನುಬಂಧ-1

GOVERNMENT OF KARNATAKA

No. HFW 155 FPR 2025.

Karnataka Government Secretariat,
Vikasa Soudha,
Dr | | B.R. Ambedkar Veedhi,
Bengalooru, dated: 11-11-2025.

## CIRCULAR

**Sub:-** Prosecution of fake doctors and Medical Establishments employing such doctors.

*******

It is considered necessary to bring it to the notice of all concerned officers regarding various provisions of law regarding the subject matter. These provisions are as follows:

**1. Action against fake doctors**

**1. Prosecution of Fake doctors:** - As per the provisions of Karnataka Ayurvedic, Naturopathy, Siddha, Unani and Yoga Practitioners' Registration and Medical Practitioners' Miscellaneous Provisions Act, 1961 (Karnataka Act 9 of 1962):

a. Under Section 34 of the Act, a person who is not registered under, -

i. the Karnataka Medical Registration Act, 1961; or
ii. the Karnataka Homeopathic Practitioners Act, 1961; or
iii. the Indian Medical Register maintained under the Indian Medical Council Act, 1956; or
iv. the list mentioned in section 18,
v. Chapter II of this Act; or

shall not practice or hold himself out, whether directly or by implication, as practicing for personal gain any system of medicine, surgery or midwifery.

b. Under section 36 of the said Act, any person who acts in contravention of the provisions of section 34 and 35 of this Act, shall on conviction, be punished with fine which may extend to rupees twenty five thousand for the first offence, to a fine of rupees two lakhs fifty thousand and imprisonment of one year for the second offence and a fine of rupees five lakhs and imprisonment for a term not exceeding three years for every subsequent offence after the conviction of such person for such subsequent offence."

..2...

ಉಪನಿರ್ದೇಶಕರು, ವೈದ್ಯಕೀಯ ಕಾ

c. A special task force has been constituted under section 40(2) of the said Act vide Notification no. HFW 325 PIM 2017, dated 29-08-2017. This task force is mandated to take action to inspect unregistered /fake /quack doctors and to prosecute them and send monthly report to the State Government. The task force consists of the following members:

  i. The Deputy commissioner or his representative;
  ii. The senior most Police Officer of the District or his representative;
  iii. The District AYUSH officer;
  iv. The Registrar, the Karnataka Ayurveda and Unani Board;
  v. District level nominated Advocate (one advocate nominated by the Department of Health and Family Welfare;
  vi. District level Social Worker (one social worker nominated by the District Health and Family Welfare Officer).

**2. Action against the Medical Establishment employing unqualified Doctors or paramedical staff under Karnataka Private Medical Establishments Act, 2007:-**

a. Since, the Medical establishments employing the fake/unqualified doctors would not have got registration under the Karnataka Private Medical Establishments Act 2007, these can be prosecuted as per section 19(1) of the said Act, which states that any person running a private medical establishment without registration shall on conviction is also liable for imprisonment for a term which may extend to three years with fine which extend to one lakh rupees.
b. Further, such an un-registered medical establishment can also be levied a penalty up to fifty thousand rupees by the Registration and Grievance Redressal Authority under section 15(1) of the Act. Moreover, such an establishment is also liable for immediate closure.
c. Moreover, such a Medical establishment having employed unqualified doctors or para medical staff can also be prosecuted under section 19(1A) of the Karnataka Private Medical Establishments Act, 2007, which prescribes that such Private Medical Establishment shall on conviction be liable for an imprisonment for a term which may extend to three years and with a fine which may extend to one lakh rupees and on conviction be liable for immediate closure of the establishment under section 19(2) of the said Act.
d. In addition to this, a private medical Establishment violating any of the provisions of the Karnataka Private Medical Establishments Act or Rules or any of the conditions of registration, is also liable for suspension or cancellation of registration under sub-section (5) of section 15 of the Karnataka Private Medical Establishments Act, 2007 and for a fine which may extend to rupees one lakh under sub-section (5) of section 19 of the said Act.

11/11/25

..3...

e. In addition, since such an establishment would not have taken registration under the Biomedical Waste Management Rules, 2016, such an establishment is also liable for action under these Rules. Those establishments which run in violation of the said Rules or run without authorisation are liable for a penalty provided under section 15 of the Environment Protection Act, 1986. Such private medical establishment shall be punishable with imprisonment for a term which may extend to five years with fine which may extend to one lakh rupees, or with both, and in case the failure or contravention continues, with additional fine which may extend to five thousand rupees for every day during which such failure or contravention continues after the conviction for the first such failure or contravention. In case of continued contravention beyond a period of one year after the date of conviction, the offender shall be punishable with imprisonment for a term which may extend to seven years. The District Level Monitoring Committee under the Chairmanship of the Deputy Commissioner of the District, with District Health Officer as the Member Secretary, has the duty to take action against such establishments.

11/11/25

(PAVITHRA)
Under Secretary to Government,
Health and Family Welfare
Department (Family Welfare).

**To:**

1. The Commissioner, Health and Family Welfare Services, Arogya Soudha, Magadi Road, Bengaluru .
2. The Commissioner, Ayush Department, Dhanvatri Road, Anand Rao Circle, Bengaluru.
3. All Deputy Commissioners and Chairman, KPME Registration and Grievance Redressal Authority. E Commissioner HFW Through )
4. The Director, Health and Family Welfare Services, Arogya Soudha, Magadi Road, Bengaluru.
5. The Deputy Director (KPME), Health and Family Welfare Services, Arogya Soudha, Magadi Road, Bengaluru.
6. The Registrar, the Karnataka Ayurveda and Unani Board, Bengaluru.
7. All District Health Officer's (Through Director, Health and Family Welfare Services).



ಉಪ ನಿರ್ದೇಶಕರು, ವೈದ್ಯಕೀಯ ಕಾಯ್ದೆ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ
"ಆರೋಗ್ಯ ಸೌಧ", 6ನೇ ಮಹಡಿ, ಪಶ್ಚಿಮ ವಿಭಾಗ,
ಬೆಂಗಳೂರು - 560 023.

KPME



8. All District Ayush Officer's (Through Ayush Commissioner).
9. The Guard File.

Copy To:

1. The Principal Secretary to Government, Health and Family Welfare Department, Vikasa Soudha, Bengalooru.
2. The Deputy Secretary to Government-4, Health and Family Welfare Department, Vikasa Soudha, Bengalooru.

ಅನುಬಂಧ-2

ಕರ್ನಾಟಕ ಸರ್ಕಾರ

ಸಂಖ್ಯೆ: ಆಕುಕ 325 ಪಿಐಎಂ 2017

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ:29.08.2017

## ಅಧಿಸೂಚನೆ

ಕರ್ನಾಟಕ ರಾಜ್ಯದಲ್ಲಿ ಅರ್ಹ ವಿದ್ಯಾರ್ಹತೆ ಇಲ್ಲದೆ ಮತ್ತು ಅಧಿಕೃತ ನೋಂದಾವಣೆ ಹೊಂದದೆ ವೈದ್ಯವೃತ್ತಿ ನಡೆಸುತ್ತಿರುವ ನಕಲಿ ವೈದ್ಯರನ್ನು ಪತ್ತೆಹಚ್ಚಿ ಅವರ ವಿರುದ್ಧ ಕಾರ್ಯಾಚರಣೆ ನಡೆಸಿ, ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳುವ ಸಲುವಾಗಿ ಹೊರಡಿಸಲಾಗಿದ್ದ ಅಧಿಸೂಚನೆ ಸಂಖ್ಯೆ: ಆಕುಕ ಆಕುಕ 215 ಪಿಐಎಂ 2007, ದಿನಾಂಕ:13.12.2007ನ್ನು ಮಾರ್ಪಡಿಸಿ, ಸರ್ಕಾರವು ಈ ಕೆಳಕಂಡವರುಗಳನ್ನೊಳಗೊಂಡ "ಜಿಲ್ಲಾ ಮಟ್ಟದ ವಿಶೇಷ ಪಡೆ" ಯನ್ನು ರಚಿಸಿ ಅಧಿಸೂಚಿಸಿದೆ.

1. ಜಿಲ್ಲಾಧಿಕಾರಿ/ಅವರ ನಾಮನಿರ್ದೇಶಿತರು.
2. ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು/ಅವರ ನಾಮನಿರ್ದೇಶಿತರು.
3. ಜಿಲ್ಲಾ ಆಯುಷ್ ಅಧಿಕಾರಿಗಳು.
4. ನೋಂದಣಾಧಿಕಾರಿಗಳು, ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯಮಂಡಳಿ.
5. ಜಿಲ್ಲಾ ಹಂತದ ನಾಮನಿರ್ದೇಶಿತ ವಕೀಲರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ನಾಮನಿರ್ದೇಶಿಸಿದ ಒಬ್ಬ ವಕೀಲರು).
6. ಜಿಲ್ಲಾ ಮಟ್ಟದ ಸಮಾಜ ಕಾರ್ಯಕರ್ತರು (ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರಿಂದ ನಾಮನಿರ್ದೇಶಿಸಲ್ಪಟ್ಟ ಒಬ್ಬ ಸಾಮಾಜಿಕ ಕಾರ್ಯಕರ್ತ).

- ಮೇಲೆ ರಚಿಸಲಾದ ಜಿಲ್ಲಾ ವಿಶೇಷ ಕಾರ್ಯಪಡೆಯು ತನ್ನ ಜಿಲ್ಲಾ ವ್ಯಾಪ್ತಿಯಲ್ಲಿ ನಕಲಿ ವೈದ್ಯವೃತ್ತಿ ನಡೆಸುತ್ತಿರುವ ನಕಲಿ ವೈದ್ಯರನ್ನು ಪತ್ತೆ ಹಚ್ಚಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸತಕ್ಕದ್ದು.
- ಇದಕ್ಕೆ ತಗಲುವ ವೆಚ್ಚವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಆಯುಷ್ ಇಲಾಖೆಯು ಭರಿಸತಕ್ಕದ್ದು.
- ಜಿಲ್ಲಾ ವಿಶೇಷ ಪಡೆಯು ಮಾಸಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ & ಸಮನ್ವಯ)

ಉಪ ನಿರ್ದೇಶಕರು, ವೈದ್ಯಕೀಯ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ
ಆರೋಗ್ಯ ಸೌಧ, 6ನೇ ಮಹಡಿ,
ಬೆಂಗಳೂರು – 560

ಇವರಿಗೆ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಇದನ್ನು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಿ ಈ ಶಾಖೆಗೆ 100 ಪ್ರತಿಗಳನ್ನು ಕಳುಹಿಸುವಂತೆ ಕೋರಿದೆ.

ಮುಂದಿನ ಅಗತ್ಯ ಕ್ರಮಕ್ಕಾಗಿ:

1. ಪ್ರಧಾನ ಮಹಾಲೇಖಪಾಲರು (ಜಿ.&ಎಸ್.ಎಸ್.ಎ/ಇ&ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು (ಎ.&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ, ವಿಧಾನಸೌಧ, ಬೆಂಗಳೂರು.
5. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
6. ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಧನ್ವಂತರಿ ರಸ್ತೆ, ಬೆಂಗಳೂರು-560 009.
7. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು.
8. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು / ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು / ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು / ಜಿಲ್ಲಾ ಆಯುಷ್ ಅಧಿಕಾರಿಗಳು (ಆಯುಷ್ ನಿರ್ದೇಶಕರ ಮುಖಾಂತರ)
9. ನೋಂದಣಾಧಿಕಾರಿಗಳು, ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯಮಂಡಳಿ, ಟ್ರೇಡ್ ಪ್ಲಾಜಾ, ಮೊದಲನೇ ಮಹಡಿ, ಎಸ್.ಸಿ.ರೋಡ್, ಆನಂದರಾವ್ ವೃತ್ತ, ಬೆಂಗಳೂರು-09.
10. ನೋಂದಣಾಧಿಕಾರಿಗಳು, ಕರ್ನಾಟಕ ಹೋಮಿಯೋಪತಿ ಮಂಡಳಿ, ಧನ್ವಂತರಿ ರಸ್ತೆ, ಬೆಂಗಳೂರು.

ಪ್ರತಿ ಮಾಹಿತಿಗಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿ-3, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.
3. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

ಅನುಬಂಧ-3

2. (ಕೆ) "ವೈದ್ಯವೃತ್ತಿಗ" ಎಂದರೆ, ವೈದ್ಯವೃತ್ತಿಗನು ತಾನು ವ್ಯಾಸಂಗ ಮಾಡಿದ, ಅರ್ಹತೆ ಪಡೆದ ಮತ್ತು ನೋಂದಾಯಿತನಾದ ವೈದ್ಯ ಪದ್ಧತಿಯಲ್ಲಿ ವೃತ್ತಿ ನಡೆಸುವುದಕ್ಕಾಗಿ ಹೋಮಿಯೋಪತಿ ವೃತ್ತಿಗರ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 35), ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ ಅಥವಾ ಯೋಗ ವೈದ್ಯ ವೃತ್ತಿಗರ ನೋಂದಣಿ ಮತ್ತು ವೈದ್ಯ ವೃತ್ತಿಗರ ಸಂಕೀರ್ಣ ಉಪಬಂಧಗಳ ಅಧಿನಿಯಮ, 1961 (1962ರ ಕರ್ನಾಟಕ ಅಧಿನಿಯಮ 9), ವೈದ್ಯಕೀಯ ನೋಂದಣಿ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 34), ಭಾರತೀಯ ವೈದ್ಯ ಕೇಂದ್ರ ಪರಿಷತ್ತು ಅಧಿನಿಯಮ, 1970 (1970ರ ಕೇಂದ್ರ ಅಧಿನಿಯಮ 48) ಹೋಮಿಯೋಪತಿ ಕೇಂದ್ರ ಪರಿಷತ್ತು ಅಧಿನಿಯಮ, 1978 (1973ರ ಕೇಂದ್ರ ಅಧಿನಿಯಮ 59) ಮತ್ತು ವೈದ್ಯ ಪರಿಷತ್ತು ಅಧಿನಿಯಮ, 1956 (1956ರ ಕೇಂದ್ರ ಅಧಿನಿಯಮ 102) ಇವುಗಳಡಿಯಲ್ಲಿ ನೋಂದಾಯಿತನಾದ ಒಬ್ಬ ವ್ಯಕ್ತಿ ಮತ್ತು ದಂತವೈದ್ಯರುಗಳ ಅಧಿನಿಯಮ, 1948ರ (1948ರ ಕೇಂದ್ರ ಅಧಿನಿಯಮ 16) ಅಡಿಯಲ್ಲಿ ನೋಂದಾಯಿತನಾದ ಒಬ್ಬ ದಂತವೈದ್ಯನನ್ನೂ ಇದು ಒಳಗೊಳ್ಳುತ್ತದೆ;

**19. ದಂಡನೆಗಳು.-** (1) ಯಾವೊಬ್ಬ ವ್ಯಕ್ತಿಯು, 7ನೇ ಪ್ರಕರಣದ ಅಡಿಯಲ್ಲಿ ಮಂಜೂರು ಮಾಡಲಾಗುವ ನೋಂದಣಿ ಇಲ್ಲದ ಒಂದು ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ಸ್ಥಾಪಿಸಿದಲ್ಲಿ, ನಡೆಸುತ್ತಿದ್ದಲ್ಲಿ ಅಥವಾ ನಿರ್ವಹಿಸುತ್ತಿದ್ದಲ್ಲಿ, ಅವನು, ಅಪರಾಧ ನಿರ್ಣಯವಾದ ನಂತರ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು 1[ಒಂದು ಲಕ್ಷ]1 ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

(2) ಒಬ್ಬ ವ್ಯಕ್ತಿಯು, (1)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ಣಿತ ಅಪರಾಧಿಯಾಗಿದ್ದಲ್ಲಿ, 1[ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರ]1ವು, ಅಂಥ ನೋಂದಾಯಿತವಲ್ಲದ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು, ಅಂಥ ನೋಂದಣಿಯು ರದ್ದು ಅಥವಾ ಅಮಾನತುಗೊಂಡಿದ್ದು ಅಂಥ ರದ್ದತಿ ಅಥವಾ ಅಮಾನತಿನ ವಿರುದ್ಧ ದಾಖಲಿಸಲಾದ ಅಪೀಲು ಇತ್ಯರ್ಥದಲ್ಲಿದ್ದ ಹೊರತು ಅದನ್ನು ಕೂಡಲೇ ಮುಚ್ಚುವಂತೆ ಆದೇಶಿಸತಕ್ಕದ್ದು.

(5) ಒಬ್ಬ ವ್ಯಕ್ತಿಯು, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮದ ಯಾವುದೇ ಇತರ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ ಅವನು, ಅಪರಾಧ ನಿರ್ಣಯವಾದ ನಂತರ, 1[ಒಂದು ಲಕ್ಷ ರೂಪಾಯಿಗಳವರೆಗೆ]1 ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**22. ನೋಂದಾಯಿತವಲ್ಲದ ಖಾಸಗಿ ವೈದ್ಯಕೀಯ ಸಂಸ್ಥೆಯ ಆವರಣಗಳನ್ನು ಸೀಲ್ ಮಾಡುವುದು.-** (1) 19ನೇ ಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, 21ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರಾಧಿಕೃತ ಅಧಿಕಾರಿಯು ಮಾಡಿದ ವರದಿಯ ಆಧಾರದ ಮೇಲೆ ಅಥವಾ ಅನ್ಯಥಾ 7ನೇ ಪ್ರಕರಣದ ಅಡಿಯಲ್ಲಿ ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ನೋಂದಣಿ ಮಾಡದೇ ನಡೆಸಲಾಗುತ್ತಿದೆ ಅಥವಾ ನಿರ್ವಹಿಸಲಾಗುತ್ತಿದೆ ಎಂದು ನೋಂದಣಿ ಅಧಿಕಾರಿಯು ಅಭಿಪ್ರಾಯಪಟ್ಟಲ್ಲಿ, ಅಂಥ ಖಾಸಗಿ ಸಂಸ್ಥೆಯನ್ನು ಕೂಡಲೇ ಮುಚ್ಚುವಂತೆ ಆದೇಶಿಸಬಹುದು ಮತ್ತು ಆವರಣವನ್ನು ಮೊಹರು ಬಂದ್ ಸಹ ಮಾಡಬಹುದು:

ಪರಂತು, ಈ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು, ತೊಂದರೆಗೊಳಗಾಗಿರ ಬಹುದಾದ ವ್ಯಕ್ತಿಗೆ ಅವನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ನೀಡಿದ ಹೊರತು ಮಾಡತಕ್ಕದ್ದಲ್ಲ.

ಉಪ ನಿರ್ದೇಶಕರು, ವೈದ್ಯಕೀಯ ಕಾಯ್ದೆ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾ
"ಆರೋಗ್ಯ ಸೌಧ", 6ನೇ ಮಹಡಿ, ಪಶ್ಚಿಮ ಪಥ
... - 560 023.

15. ಜುಲ್ಮಾನೆ ಅಥವಾ ನೋಂದಣಿಯ ಅಮಾನತು ಅಥವಾ ರದ್ಧತಿ.- (1) 7ನೇ ಪ್ರಕರಣದ (8)ನೇ ಉಪಪ್ರಕರಣದ ಅಡಿಯಲ್ಲಿ ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು ನೀಡಿದ ಯಾವುವೇ ನಿರ್ದೇಶನಗಳನ್ನು ಅನುಪಾಲಿಸಲು ವಿಫಲವಾಗುವ ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಯ ಸಂದರ್ಭದಲ್ಲಿ, ಪ್ರಾಧಿಕಾರವು, ಆ ಸಂಸ್ಥೆಗೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವೊಂದನ್ನು ನೀಡಿದ ನಂತರ, ಐವತ್ತು ಸಾವಿರ ರೂಪಾಯಿಗಳಿಗಿಂತ ಮೀರದಂತೆ ದಂಡವನ್ನು ವಿಧಿಸಬಹುದು ಮತ್ತು ಅನುಪಾಲನೆಗೆ ಸಮಯವನ್ನು ನೀಡಬಹುದು ಅಥವಾ ಸಂಸ್ಥೆಯ ನೋಂದಣಿಯನ್ನು ರದ್ದುಗೊಳಿಸಲು ಮುಂದಾಗಬಹುದು.

(5) ನೋಂದಣಿ ಮತ್ತು ಕುಂದುಕೊರತೆ ನಿವಾರಣಾ ಪ್ರಾಧಿಕಾರವು, ದೂರಿನ ಆಧಾರದ ಮೇಲೆ ಅಥವಾ ಅನ್ಯಥಾ, ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ನಿಯಮಗಳ ಅಥವಾ ನೋಂದಣಿಯ ಷರತ್ತುಗಳ ಉಲ್ಲಂಘನೆಯಾಗಿದೆಯೆಂದು ಮೇಲ್ನೋಟಕ್ಕೆ ಕಂಡುಬಂದರೆ, ಲಿಖಿತದಲ್ಲಿ ಆದೇಶವನ್ನು ನೀಡುವ ಮೂಲಕ ಮತ್ತು ಅದರಲ್ಲಿ ಕಾರಣಗಳನ್ನು ಲಿಖಿತದಲ್ಲಿ ದಾಖಲಿಸುವ ಮೂಲಕ ಖಾಸಗಿ ವೈದ್ಯಕೀಯ ಸಂಸ್ಥೆಯ ನೋಂದಣಿಯನ್ನು ಅಮಾನತುಗೊಳಿಸಬಹುದು ಅಥವಾ ರದ್ದುಗೊಳಿಸಬಹುದು:

6 ಸಾಮಾನ್ಯ-4

| Sl. No | District Name | Total Fake Doctor Count | Action taken against fake doctors | | | Any legal cases filed against fake doctor in KPME Appellate Authority/JMFC | Police FIR case details |
|---|---|---|---|---|---|---|---|
| | | | Closed | Penalty | | | |
| | | | | if Paid (Amount) | Not Paid | | |
| 1 | Kalaburagi | 127 | - | 9 | 118 | - | - |
| 2 | Raichur | 124 | 122 | - | - | - | 2 |
| 3 | Dharwad | 75 | 64 | - | - | - | 11 |
| 4 | Kolar | 31 | 30 | - | - | - | 1 |
| 5 | Chamarajanagar | 27 | 27 | - | - | - | - |
| 6 | Ballari | 23 | | 20 | 3 | | - |
| 7 | Haveri | 13 | 13 | - | - | - | - |
| 8 | Bengaluru Urban | 16 | 6 | 5 | 2 | - | 3 |
| 9 | Chikkaballapura | 17 | 14 | 3 | - | - | - |
| 10 | Koppal | 14 | 14 | - | - | - | - |
| 11 | Bidar | 12 | 10 | 2 | - | - | - |
| 12 | Bagalkote | 12 | 4 | 6 | 2 | - | - |
| 13 | Vijayanagara | 10 | 5 | - | - | 5 | - |
| 14 | Mysore | 8 | 3 | 1 | 2 | 2 | - |
| 15 | Belagavi | 7 | - | 7 | - | - | - |
| 16 | Yadgiri | 6 | 6 | - | - | - | - |
| 17 | Dakshina kannada | 6 | 4 | 2 | - | - | - |
| 18 | DAVANGERE | 5 | 3 | 2 | - | - | - |
| 19 | Tumakuru | 5 | - | 4 | 1 | - | - |
| 20 | Vijayapura | 4 | 3 | - | - | 1 | - |
| 21 | Bangalore Rural | 4 | - | 3 | - | - | 1 |
| 22 | CHIKKAMAGALURU | 2 | 2 | - | - | - | - |
| 23 | Udupi | 2 | 1 | 1 | - | - | - |
| 24 | Chitradurga | 2 | 2 | - | - | - | - |
| 25 | Ramanagara | 2 | 2 | - | - | - | - |
| 26 | Uttara kannada | 2 | 2 | - | - | - | - |
| 27 | Gadag | 0 | - | - | - | - | - |
| 28 | Hassan | 0 | - | - | - | - | - |
| 29 | Kodagu | 0 | - | - | - | - | - |
| 30 | Shivamogga | 0 | - | - | - | - | - |
| 31 | Mandya | 0 | - | - | - | - | - |
| | Total | 556 | 337 | 65 | 128 | 8 | 18 |

ಉಪ ನಿರ್ದೇಶಕರು, ವೈದ್ಯಕೀಯ ಕಾಯ್ದೆ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ
"ಆರೋಗ್ಯ ಸೌಧ", ... ಮಹಡಿ, ಪಶ್ಚಿಮ ವಿಭಾಗ,
... – 560 023.